Postal Reg. No. DWD/179/2021-23
NKR/BD/22-1 /WPP DWD/BANAJIGA BANDU/2021
Licensed to post without prepayment

ಓಂ

RNI No. KARKAN / 2012 / 45342

# ಬಣಜಿಗ ಬಂಧು

ಮಾಸ ಪತ್ರಿಕೆ

ಸಮಸ್ತ ಬಣಜಿಗರ ಮುಖವಾಣಿ – ಬಸವಾದಿ ಶರಣ ಸಂಸ್ಕೃತಿಯ ಪ್ರತಿಬಿಂಬ

▪ ಸಂಪುಟ–09 ▪ Volume-09 ▪ ಸಂಚಿಕೆ–12 ▪ Issue - 12 ▪ 5ನೇ ಅಗಸ್ಟ – 2021 ▪ 5th August - 2021 ▪ Rs. 25/-




ಕರ್ನಾಟಕ ರಾಜ್ಯ ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘ (ರಿ) ಬೆಂಗಳೂರು ಪ್ರಕಟಿತ

R.N.I. No. KARKAN / 2012 / 45342
Postal Reg.No. DWD / 179 / 2021-23

# ಬಣಜಿಗ ಬಂಧು ಮಾಸ ಪತ್ರಿಕೆ

ಸಂಪುಟ-9 • ಸಂಚಿಕೆ 12 • 5 ನೇ ಅಗಸ್ಟ 2021 • ಬೆಲೆ : ರೂ.25-00

**BANAJIGA BANDHU** Monthly Magazine

Vol.-IX • Issue - 12 • 5th August 2021 • Price Rs.25·00

**"BANAJIGA BANDHU"**
"Aarna Residency", Narayanpur Main Road,
Dharwad - 580 008. Dist. Dharwad.
(Karnataka) Phone : 0836-2974405
Email : banajigabandhu@gmail.com

Details of "Banajiga Bandhu" Bank Account
Account Name : **Banajiga Bandhu**
Account Number : **0510201000697**
IFSC Number : CNRB0000510
**CANARA BANK,** Malamaddi Branch, **DHARWAD.**

**ಗೌರವ ಸಂಪಾದಕರು**
ಡಾ॥ ಎನ್. ಜಿ. ಮಹದೇವಪ್ಪ
ಡಾ॥ ವೀರಣ್ಣ ರಾಜೂರ ಡಾ॥ ಸಂಗಮೇಶ ಹಂಡಿಗಿ

ಸಂಪಾದಕರು
**ರುದ್ರಣ್ಣ ವೀ. ಹೊಸಕೇರಿ**

## ಬಂಧುವಿನೊಳಗೆ...

▶ ಬಸವ ಭಾವಗಳೊಂದಿಗೆ – ಶ್ರೀ ವೆಂಕಟೇಶ ಜನಾದ್ರಿ ೦೭
▶ ಅಕ್ಷರಕ್ಕಿಳಿಯದ ರತ್ನಗಳು – ಶ್ರೀ ಗವಿಶಿದ್ದಪ್ಪ ಕೊಪ್ಪಳ ೧೧
▶ ಜನಪದ ನಂಬಿಕೆಗಳು – ಡಾ. ಎಂ.ಎಸ್. ಮಾಗಣಗೇರಿ ೧೫
▶ ಶರಣಾಕ್ಷರ ಬಂಧು – ಶ್ರೀ ವೆಂಕಟೇಶ ಜನಾದ್ರಿ ೧೯
▶ ಭಾರತೀಯ ಸಂಸ್ಕೃತಿ – ಶ್ರೀ ಅಜಯ ಉದೋಸಿ ೨೦
▶ ಆರೋಗ್ಯ ಸೂತ್ರಗಳು – ಪ್ರೊ. ಜಿ.ಎಚ್. ಹನ್ನೆರಡುಮಠ ೨೩
▶ ಪದ ಬಂಧು – ಶ್ರೀ ಬಸವರಾಜ ಬಂಡಿವಾಡ ೨೫
▶ ವಚನಗಳಲ್ಲಿ ವಿಜ್ಞಾನ – ಶ್ರೀ ಲೋಕೇಶ ಕೊರವಿ ೨೭
▶ ತಿಂಗಳಿಗೊಂದು ಕಥೆ – ಸಂಪಾದಕರು ೨೯
▶ ಜಾನಪದ ಮಹಿಳೆ – ಶ್ರೀಮತಿ ಲಲಿತಾ ಅಂಗಡಿ ೩೧
▶ ಹೊಸ ಪ್ರಯತ್ನ – ಸಂಪಾದಕರು ೩೪

# ಸಂಪಾದಕೀಯ



ರುದ್ರಣ್ಣ ಹೊಸಕೇರಿ
ಸಂಪಾದಕರು
94481 27222

ಈ ತಿಂಗಳ ಸಂಪಾದಕೀಯದಲ್ಲಿ ನಾನು ನಿಮಗೆ ಒಂದು ಅತೀ ಸಂತೋಷದ ಸುದ್ದಿ, ಒಂದು ಅತೀ ದುಃಖದ ಸಂಗತಿ ಹೇಳಲೇ ಬೇಕಾದ ಅನಿವಾರ್ಯತೆ ನನ್ನ ಪಾಲಿಗಿದೆ. ಮೊದಲು ಸಂತೋಷದ ಸುದ್ದಿ ಹೇಳಿ ಕುಣಿದು ಕುಪ್ಪಳಿಸಿ ಬಿಡೋಣ.

ಕಳೆದ 2 ವರ್ಷಗಳಿಂದ ಗುರುಗಳಿಲ್ಲದ ಮಠ, ಹಿರಿಯರಿಲ್ಲದ ಮನೆ, ದೇವರಿಲ್ಲದ ಗುಡಿಯಂತಾಗಿತ್ತು ನಮ್ಮ ಕರ್ನಾಟಕ ರಾಜ್ಯ ಬಣಜಿಗ ಕ್ಷೇಮಾಭಿವೃದ್ಧಿ ಸಂಘ. ದೇವರ ದಯೆಯಿಂದ ದಿನಾಂಕ: 24/7/2021 ರಂದು ವಿಜಯಪುರದಲ್ಲಿ ನಡೆದ ನೂತನ ಕಾರ್ಯಕಾರಿಣಿ ಸಭೆಯಲ್ಲಿ ಮುಂದಿನ 5 ವರ್ಷಗಳಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲು ತೀರ್ಮಾನಿಸಿ, ಮೊದಲು ಒಬ್ಬ ರಾಜ್ಯಾಧ್ಯಕ್ಷರನ್ನು ಆಯ್ಕೆ ಮಾಡಲಾಯಿತು. ನವ ಯುವಕರನ್ನು ನಾಚಿಸುವ 70 ವರ್ಷದ ಶ್ರೀ ಅಂದಪ್ಪಾ ಗವಿಸಿದ್ದಪ್ಪ ಜವಳಿ, ಸಾ: ಕುಕನೂರ ಇವರನ್ನು ರಾಜ್ಯಾಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಸಮಾಜಕ್ಕೆ ಹಿಡಿದಿದ್ದ ಗ್ರಹಣ ಬಿಟ್ಟು ಹೋಯಿತು. ಬಣಜಿಗ ಸಮಾಜದ ಹೊಸ ಸಂವತ್ಸರ ಪುನಃ ಆರಂಭವಾಗಿ ಬೆಳ್ಳಿಯ ಗೆರೆ ಮೂಡಿತು. ಶ್ರೀ ಅಂದಪ್ಪಾ ಜವಳಿಯವರು ಸದಾ ಲವಲವಿಕೆಯಿಂದ ಹಿಡಿದ ಕೆಲಸಗಳನ್ನು ಬಿಡದೇ ಛಲದಿಂದ ಸಾಧಿಸುವ ಅವರ ಗುಣ ನಮಗೆಲ್ಲರಿಗೂ ಅನುಕರಣೀಯ. ಅವರ ಅವಧಿಯಲ್ಲಿ ಸಮಾಜಕ್ಕೆ ಉತ್ತಮ ಕೆಲಸಗಳು ನಡೆದು ಬಣಜಿಗ ಸಮಾಜ ಬಾನೆತ್ತರಕ್ಕೆ ಬೆಳೆಯಲಿ ಎಂದು ನಮ್ಮ ಎಲ್ಲ ಓದುಗರ ಪರವಾಗಿ ಶ್ರೀ ಅಂದಪ್ಪ ಜವಳಿಯವರಿಗೆ ಹೃದಯ ತುಂಬಿದ ಅಭಿನಂದನೆಗಳನ್ನು ತಿಳಿಸುವೆ.

ಈ ರಾಜ್ಯಾಧ್ಯಕ್ಷ ಚುನಾವಣೆಯಲ್ಲಿ ನಾನು ಒಬ್ಬ ಆಕಾಂಕ್ಷಿಯಾಗಿ ನಾಮಪತ್ರ ಸಲ್ಲಿಸಿದ್ದೆ. ಆದರೆ ಸಭೆಯಲ್ಲಿ ಕೆಲವು ಜನ ನನ್ನ ಹಿತೈಸಿಗಳು- ರುದ್ರಣ್ಣನವರೇ ನೀವು ಈಗಾಗಲೇ "ಬಣಜಿಗ ಬಂಧು"ವಿನ ಸಂಪಾದಕರಾಗಿ ಉತ್ತಮ ಕೆಲಸ ಮಾಡುತ್ತಿದ್ದೀರಿ. ಆದ್ದರಿಂದ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಹಿರಿಯರು ಸ್ಥಾನ ಪಡೆಯಲಿ ಎಂದು ತಿಳಿಸಿದರು.

ಲೇಖನಗಳಲ್ಲಿನ ವಿಷಯಗಳು ಹಾಗೂ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಹೊಣೆಗಾರರಾಗಿರುತ್ತಾರೆ

# ಜನಪದ ನಂಬಿಕೆಗಳು




ಡಾ. ಎಂ.ಎಸ್. ಮಾಗಣಗೇರಿ

ಸಾ: ವಿಜಯಪುರ

9986213177


ಜನಪದ ನಂಬಿಕೆಗಳು ಪರಂಪರಾನುಗತವಾಗಿ ಅಂಗೀಕೃತವಾದ ಒಂದು ಪರಿಕಲ್ಪನೆ. ಹೀಗೆ ಅಂಗೀಕೃತವಾಗುವಲ್ಲಿ ಪುನರಾವರ್ತನೆ ಹಾಗೂ ಸಾಮೂಹಿಕ ನಿರೀಕ್ಷಣೆಗಳು ಮುಖ್ಯವಾಗುತ್ತವೆ. ನಂಬಿಕೆಗಳು ಜನಪದರ ಜೀವನಾನುಭವದ ಉತ್ಪನ್ನಗಳು. ಹೀಗಾಗಿ ಮಾನವ ಬದುಕಿಗೂ ನಂಬಿಕೆಗೂ ಬೇರ್ಪಡಿಸಲಾಗದ ಸಂಬಂಧ. ಅದು ಸೂಚನೆ, ನಿಯಮ, ವಿಧಿನಿಷೇಧ, ನಿರ್ದೇಶನ, ಆಗ್ರಹ, ಆದೇಶ ಮತ್ತು ಆಜ್ಞೆಗಳ ರೂಪದಲ್ಲಿ ನಿತ್ಯ ಬದುಕಿನೊಂದಿಗೆ ಸಂಬಂಧವನ್ನು ಕಂಡುಕೊಂಡಿದೆ. ಜನಪದರ ಕೆಲಸ, ಆಲೋಚನೆ, ರೂಢಿ, ಜೀವನಕ್ರಮ, ಸಂಪ್ರದಾಯ ಆಚರಣೆಗಳೆಲ್ಲವೂ ಮೂಲಭೂತವಾಗಿ ನಂಬಿಕೆಗಳಿಂದ ಪ್ರೇರಿತವಾದವು. ನಂಬಿಕೆ ಸಂಪ್ರದಾಯ, ಆಚರಣೆಗಳೊಂದಿಗೆ ಅಂತರ್ ಸಂಬಂಧವನ್ನು ಹೊಂದಿದ್ದು, ಆ ಮೂಲಕ ಕ್ರಿಯಾರೂಪವನ್ನು ತಾಳುತ್ತದೆ. ಅದು ಜನಪದ ಪ್ರಕಾರಗಳಾದ ಗಾದೆ, ಜನಪದ ವೈದ್ಯ, ಜನಪದ ಕತೆ, ಜನಪದ ಐತಿಹ್ಯ, ಜನಪದ ಪುರಾಣ, ಜನಪದ ಮಂತ್ರವಿದ್ಯೆ, ಜನಪದ ಧರ್ಮ ಇವುಗಳೊಂದಿಗೆ ಒಳಸಂಬಂಧವನ್ನು ಹೊಂದಿದ್ದು ಸಂಕೀರ್ಣ ಸ್ವರೂಪದ್ದಾಗಿದೆ.

ಜನಪದ ನಂಬಿಕೆಗಳು ಜನಜೀವನದಲ್ಲಿ ನಡೆದಾಡುವ ನಾಣ್ಯಗಳಿದ್ದಂತೆ. ಅವು ಜನತೆಯ ಜೀವನಾನುಭವದ ಮೂಸೆಯಿಂದ ಮೂಡಿ ಬಂದು, ಬದುಕಿನಲ್ಲಿ ಬೆರೆತು ಪರಿಣಾಮಕಾರಿಯಾಗಿ ಪ್ರಭಾವ ಬೀರಿ ಜೀವಂತವಾಗಿವೆ. ಜನತಾ ಭಾವದ ಅಭಿವ್ಯಕ್ತಿಗಳಾದ ಜನಪದ ನಂಬಿಕೆಗಳು, ಜನತೆಯ ಪರಂಪರಾಗತ ಜ್ಞಾನಸುಧೆ, ಸುಸಂಸ್ಕೃತ ಹೃದಯದ ಪರಿಪಕ್ವ ಅನುಭವದ ಸಾರವೆಂದು ಹೇಳಬಹುದು. ಹೀಗಾಗಿ ಇವು ಜನಜೀವನದಲ್ಲಿ ಹಾಸುಹೊಕ್ಕಾಗಿ ಸೇರಿ, ಅವರ ಬದುಕನ್ನೇ ನಿಯಂತ್ರಿಸಿ ನಿರ್ದೇಶಿಸುವ ಪ್ರಮುಖ ಶಕ್ತಿಯಾಗಿ ಪರಿಣಾಮಿಸಿ, ಜನಪದ ಬದುಕಿಗೆ ವಜ್ರಕವಚವಾಗಿದೆ.

ಈ ಹಿನ್ನೆಲೆಯಲ್ಲಿ ಜನಪದ ನಂಬಿಕೆಗಳ ಒಂದು ಪ್ರಮುಖ ಅಂಗವಾದ 'ಮಾನವ ಸಂಬಂಧಿ ನಂಬಿಕೆ'ಗಳನ್ನು ಕುರಿತು ಇನ್ನು ನೋಡಬಹುದು. ಸಮಾಜಶಾಸ್ತ್ರ, ಮಾನವಶಾಸ್ತ್ರ, ಮನಶ್ಶಾಸ್ತ್ರ ಹಾಗೂ ಜಾನಪದ ವಿಜ್ಞಾನ ಮುಂತಾದ ಶಾಖೆಗಳ ಮಾನವನ ಸಂಬಂಧನಿಷ್ಠ, ಗುಣನಿಷ್ಠ, ಮನೋನಿಷ್ಠ ಹಾಗೂ ಆಚರಣೆನಿಷ್ಠ ಸರ್ವ ಸಂಗತಿಗಳು ಈ ಪ್ರಬಂಧದ ನೀಲನಕ್ಷೆಗೆ ಆಹಾರ ಒದಗಿಸುತ್ತವೆ. ಮನುಷ್ಯನ ವಿವಿಧ ಅವಸ್ಥೆ – ಆಚರಣೆಗಳಿಗೆ ಸಂಬಂಧಿಸಿದ ಭಾವ ಪ್ರಧಾನ ಹಾಗೂ ಕಲ್ಪನಾಪ್ರಧಾನ ಅಂಶಗಳೆಲ್ಲವೂ ಇದರಲ್ಲಿ ಸೇರುತ್ತವೆ. ಕಾಯುವ ದೇವರು, ಕಾಡುವ ದೆವ್ವ, ಉಪಕರಿಸುವ ಪ್ರಾಣಿ-ಪಕ್ಷಿ ಹಾಗೂ ಆಯುರಾರೋಗ್ಯ ನೀಡುವ ಸಸ್ಯ ಸಂಪತ್ತು ಮುಂತಾದವುಗಳ ನಿಕಟ ಸಂಪರ್ಕವು ಮಾನವನಿಗಿದೆಯಾದರೂ, ಆ ಬಗ್ಗೆ ಪ್ರತ್ಯೇಕ ಪ್ರಬಂಧಗಳಿರುವದರಿಂದ ಅವನ್ನು ಹೊರತುಪಡಿಸಿ, ಕೇವಲ ಮಾನವನ ಆಂಗಿಕ ಆಚರಾಣಾತ್ಮಕ ಅಂಶಗಳಿಗೆ ಮಾತ್ರ ಪ್ರಬಂಧದ ವಿಷಯವನ್ನು ಸೀಮಿತಗೊಳಿಸಿಕೊಳ್ಳಲಾಗಿದೆ.

ಹುಟ್ಟು ಸಾವುಗಳ ಮಾರ್ಗಮಧ್ಯದ ವೈವಿಧ್ಯಮಯವಾದ ಈ ಸಂಸಾರ ಯಾತ್ರೆಯಲ್ಲಿ ಲೆಕ್ಕವಿಡಲು ಬೇಸರಪಡುವಷ್ಟು ನಂಬಿಕೆಗಳು ಮನುಷ್ಯನ ಬಾಳಿನಲ್ಲಿ ಸೇರಿಕೊಂಡಿವೆಯಾದರೂ, ಆ ಎಲ್ಲ ನಂಬಿಕೆಗಳ ಮಹಾಂಬುಧಿಯನ್ನು ಈಜುವ ಸಾಹಸಕ್ಕೆ ತೊಡಗದೇ ಆಚಾರ-ವಿಚಾರ, ಕ್ರಿಯೆ-ಕಲ್ಪನೆಗಳಿಗೆ ಸಂಬಂಧಿಸಿದಂತೆ, ಮಾನವನು ಅಳವಡಿಸಿಕೊಂಡ ಆಂತರಿಕ ಮತ್ತು ಬಾಹ್ಯವ್ಯಕ್ತಿತ್ವದ ವಿಚಾರಗಳಿಗೆ ಮಾತ್ರ ಇಲ್ಲಿ ಒತ್ತು ಕೊಡಲಾಗಿದೆ.

ನಿತ್ಯ ಜೀವನದಲ್ಲಿ ಅನ್ಯ ವ್ಯಕ್ತಿಯೊಂದಿಗೆ ಸಮೂಹದೊಂದಿಗೆ ಆತ ಇರಿಸಿಕೊಂಡ ನಿಕಟ ಸಂಪರ್ಕದಲ್ಲಿ ಬಂಗಾರದ ಎಳೆಯಂತೆ ಮಿಂಚುವ ವಿಧಿ ನಿಷೇಧಾತ್ಮಕ ನಂಬಿಕೆಗಳ ಸಂಗ್ರಹ ಹಾಗೂ ವಿಶ್ಲೇಷಣೆ ಪ್ರಬಂಧದ ಪ್ರಮುಖ ಉದ್ದೇಶವಾಗಿದೆ. ಅಂತೆಯೆ ಮದುವೆ, ಗೃಹಜೀವನ, ಗರ್ಭಿಣಿ, ಕೂಸು, ಉಡುಗೆ-ತೊಡುಗೆ, ಹಬ್ಬ-ಹರಿದಿನ, ವಾರ-ನಕ್ಷತ್ರ, ಊಟ, ಯಾತ್ರೆ, ಪೂಜೆ, ನಿದ್ರೆ, ಕನಸು, ಅವಯವ, ರೋಗ, ಸುಳಿ ಶುಭಾ-ಅಶುಭಗಳ ಕಲ್ಪನೆ, ಶಕುನ ಹಾಗೂ ಶವ ಇವೇ ಮುಂತಾದ ವಿಷಯಗಳನ್ನೊಳಗೊಂಡ ಭಾವನಾತ್ಮಕ ಮಾನವ ಸಂಬಂಧಿ ನಂಬಿಕೆಗಳ ವಿಶ್ಲೇಷಣೆಯನ್ನು ಗಮನಿಸಬಹುದು.

ಪ್ರಾಚೀನ ಕಾಡುಮಾನವನಿಂದ ಇತ್ತೀಚಿನ ನಾಡು ಮಾನವನವರೆಗೆ ಆಯಾ ಕಾಲಘಟ್ಟದ ಪರಿಜ್ಞಾನಕ್ಕೆ ತಕ್ಕಂತೆ ನಿತ್ಯ ಜೀವನದ ಆಚರಣೆಯ ಸತ್ಯ ಸಂಗತಿಗಳಾಗಿ ಮಾನವ ನಿಷ್ಠ ನಂಬಿಕೆಗಳು ಜನ್ಮ ತಾಳುತ್ತಲೇ ಬಂದಿವೆ. ನಂಬಿಕೆಯ